ಬೀರಲಾರವು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಟಿಬೆಟ್‌ನ ವಾಯುವ್ಯ ಭಾಗದ 20,000 ಅಡಿ ಎತ್ತರ ಪ್ರದೇಶದಲ್ಲಿ ಕಂಡು ಬಂದಿರುವ ಗುಲಿಯ ಹಿಮಸ್ತರದಲ್ಲಿ ಈ ವೈರಸ್ ಪತ್ತೆಯಾಗಿರುವುದು ಅತ್ಯಂತ ವಿಶೇಷವೆನಿಸಿದೆ.

### ವೈರಸ್‌ಗಳ ತವರು ಸಾಗರ

ಅಧ್ಯಯನದ ಪ್ರಕಾರ ಒಂದು ಮಿಲಿ ಮೀಟರ್ ಎತ್ತರದ ಸಾಗರ ಮೇಲ್ಮೈ ನೀರಿನಲ್ಲಿ 10 ದಶಲಕ್ಷ ವೈರಸ್‌ಗಳಿರುತ್ತವೆ. 'ನ್ಯಾಷನಲ್ ಸೈನ್ಸ್ ಜರ್ನಲ್'ನಲ್ಲಿರುವ ಮಾಹಿತಿಯಂತೆ, 5,500 ಹೊಸ ವೈರಸ್‌ಗಳು 2022ರಲ್ಲಿ ಪತ್ತೆಯಾಗಿದ್ದವು.

ವೈರಸ್ ಗಳಲ್ಲಿ ಆರ್‌ಎನ್‌ಎ (ರೈಬೋ ನ್ಯೂಕ್ಲಿಕ್ ಆಸಿಡ್) ಅಥವಾ ಡಿಎನ್‌ಎ (ಡಿ ಆಕ್ಸಿ ರೈಬೋ ನ್ಯೂಕ್ಲಿಕ್ ಆಸಿಡ್) ವಂಶವಾಹಿ ಇರುತ್ತದೆ. ಆರ್‌ಎನ್‌ಎ ವಂಶವಾಹಿ ಹೊಂದಿರುವ ವೈರಸ್ ಹೆಚ್ಚಿನ ಸಂಖ್ಯೆಯ ಮ್ಯುಟೇಶನ್ ಹೊಂದುವುದರಿಂದ ಹೆಚ್ಚು ಅಪಾಯಕಾರಿ. ಇದು ನೂರಕ್ಕೂ ಹೆಚ್ಚು ಬಾರಿ ರೂಪಾಂತರಗೊಳ್ಳಬಹುದು. ನಾವು ತೆಗೆದುಕೊಳ್ಳುವ ಚಿಕಿತ್ಸೆಗೆ ನಿರಂತರ ಪ್ರತಿರೋಧ ತೋರುತ್ತವೆ. ಡಿಎನ್‌ಎ ಯುಕ್ತ ವೈರಸ್‌ಗಳು ಹಾಗಲ್ಲ.

### ಈಗ ಎಷ್ಟು ವೈರಸ್‌ಗಳು?

ನೂರು ವರ್ಷಗಳ ಹಿಂದೆ ಜಗತ್ತು ಸ್ಪ್ಯಾನಿಷ್ ಫ್ಲೂಗೆ ತುತ್ತಾಗಿತ್ತು. ಅದಾದ 39 ವರ್ಷಗಳ ನಂತರ ಹೊಸ ವೈರಸ್ ಬೆಳಕಿಗೆ ಬಂತು. ಅದರ ನಂತರ ಇನ್ನೊಂದು ಹೊಸ ವೈರಸ್ ಬರಲು 10 ವರ್ಷ ಬೇಕಾಯಿತು. 2011ರಿಂದ ಇಲ್ಲಿಗೆ ನಾವು ಏಳು ಹೊಸ ಬಗೆಯ ವೈರಸ್‌ಗಳ ಆಕ್ರಮಣಕ್ಕೆ ತುತ್ತಾಗಿದ್ದೇವೆ. ಇದು ಅತ್ಯಂತ ಅಪಾಯಕಾರಿ ವೃದ್ಧಿ.

ಏಕೆ ಈ ಏರಿಕೆ ಎಂಬುದನ್ನು ಸ್ಪಷ್ಟವಾಗಿ ಹೇಳಲು ಬರುವುದಿಲ್ಲ. ಒಂದು ಅಧ್ಯಯನದ ಪ್ರಕಾರ, ಪೌಲ್ಟ್ರಿ ಬೇಸಾಯ ಮತ್ತು ಪ್ರಾಣಿ ನಿರ್ವಹಣೆಯಲ್ಲಿ

**ವೈರಾಣು ವಿರುದ್ಧ ಮಲೆನಾಡ ಕಷಾಯ**

ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಬಿಳಿ ರಕ್ತ ಕಣಗಳು ಹಲವು ವೈರಸ್‌ಗಳ ವಿರುದ್ಧ ತಡೆಗೋಡೆಯಂತೆ ನಿಲ್ಲುತ್ತವೆ. ಆದರೆ ಕೆಲವು ವೈರಸ್‌ಗಳ ಮುಂದೆ ಬಿಳಿ ರಕ್ತ ಕಣಗಳ ಹೋರಾಟ ಅಷ್ಟಾಗಿ ನಡೆಯುವುದಿಲ್ಲ. ಅವು ನಾಶಗೊಂಡಾಗ ವೈರಾಣುವಿನ ಸೋಂಕು ಉಲ್ಬಣಗೊಳ್ಳುತ್ತದೆ. ಆದಕ್ಕೆಂದೇ ಮಲೆನಾಡಿನ ಅನೇಕ ಭಾಗಗಳಲ್ಲಿ ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಹಲವು ಬಗೆಯ ರೋಗನಿರೋಧಕ ಕಷಾಯಗಳನ್ನು ದಾಸ್ತಾನು ಮಾಡಿರುತ್ತಾರೆ. ಅಲ್ಲಿನ ಮನೆಮನೆಗಳಲ್ಲಿ ನಿತ್ಯವೂ ಕಷಾಯದ ಸಮಾರಾಧನೆ ನಡೆಯುತ್ತದೆ. ಅಮೃತಬಳ್ಳಿಯ ಕಷಾಯವಂತೂ ನಿಜವಾದ ಜೀವಾಮೃತದಂತೆ ವೈರಾಣುಗಳ ವಿರುದ್ಧ ಹೋರಾಟ ಮಾಡುತ್ತದೆ.

> ಝೆಕ್ ಗಣರಾಜ್ಯದ ವಿಜ್ಞಾನಿಗಳು ಸ್ಟ್ರಾಬೆರಿ ಹಣ್ಣುಗಳಿಗೆ ತಗಲುವ ವೈರಸ್‌ಗಳನ್ನು ಪತ್ತೆ ಮಾಡಿದ್ದಾರೆ. ವೈರಸ್‌ಗಳು ಒಂದು ಎಕರೆ ಸ್ಟ್ರಾಬೆರಿ ಹೊಲದ ಶೇ. 30ರಷ್ಟು ಸಸ್ಯಗಳನ್ನು ಸೋಂಕಿಗೆ ಒಳಪಡಿಸುತ್ತವೆ ಎಂಬುದು ದೃಢಪಟ್ಟಿದೆ.

ಆಗುವ ಲೋಪಗಳಿಂದ ಈ ವೈರಸ್‌ಗಳು ಜನಿಸುತ್ತವೆ ಎಂದು ತಿಳಿದು ಬಂದಿದೆ. ಇನ್‌ಫ್ಲುಯೆಂಜ ಉಂಟುಮಾಡುವ ವೈರಸ್ ಮನುಷ್ಯ ಪ್ರಾಣಿ ಮತ್ತು ಪಕ್ಷಿಗಳನ್ನು ಬಾಧಿಸುವುದರಿಂದ ವಾತಾವರಣದಲ್ಲಾಗುವ ಬದಲಾವಣೆಗಳು ಕಾರಣ ಎನ್ನುತ್ತಾರೆ ತಜ್ಞರು. ಪ್ರಯೋಗಾಲಯದಲ್ಲಿ ಅಕಸ್ಮಾತಾಗಿ ಜರುಗುವ ಪ್ರಮಾದಗಳಿಂದ ಕೆಲವು ವೈರಸ್‌ಗಳು ಹೊರ ಜಗತ್ತಿಗೆ ಬರುತ್ತವೆ. ಇನ್ನೂ ಕೆಲವನ್ನು ಉದ್ದೇಶಪೂರ್ವಕವಾಗಿಯೇ ಬಿಡುಗಡೆ ಮಾಡಲಾಗುತ್ತದೆ. ಎರಡು ಸಂದರ್ಭಗಳಲ್ಲಿ ದೊಡ್ಡಮಟ್ಟದ ಪ್ರಾಣಹಾನಿ ಆಗುತ್ತದೆ. 2019ರಲ್ಲಿ ಹಂದಿ ಜ್ವರ ಬಂದು ಅನೇಕ ಅನನುಕೂಲಗಳು ಸೃಷ್ಟಿಯಾಗಿದ್ದವು.

ಮುಂದಿನ ಪಿಡುಗು ಹಬ್ಬಿಸುವ ವೈರಸ್ ಯಾವುದು ಎಂಬುದನ್ನು ಊಹಿಸುವುದು ಸಾಧ್ಯವೇ ಇಲ್ಲ. 2020ರಲ್ಲಿ 'ಇಂಟರ್ ಗೌರ್ನಮೆಂಟಲ್ ಸೈನ್ಸ್ ಪಾಲಿಸಿ ಪ್ಲಾಟ್‌ಫಾರ್ಮ್ ಆನ್ ಬಯೊ ಡೈವರ್ಸಿಟಿ ಅಂಡ್ ಎಕೋ ಸಿಸ್ಟಮ್' ಸಂಸ್ಥೆಯ ವರದಿಯಲ್ಲಿ ಕೊರೊನಾ ವೈರಸ್‌ನಂತಹ ಸಾಂಕ್ರಾಮಿಕ ರೋಗಗಳ ಸಂಖ್ಯೆ ಮತ್ತಷ್ಟು ಹೆಚ್ಚುತ್ತದೆ ಮತ್ತು ಹೆಚ್ಚಿನ ಸಂಖ್ಯೆಯ ಜನ ಪ್ರಾಣ ಕಳೆದುಕೊಳ್ಳುತ್ತಾರೆ ಎಂದು ಉಲ್ಲೇಖಿಸಲಾಗಿತ್ತು.

ನಾವು ಭೂಮಿಯನ್ನು ಬಳಸುತ್ತಿರುವ ರೀತಿಯಲ್ಲಿ ಎಷ್ಟು ಬದಲಾವಣೆಯಾಗುತ್ತದೆಯೋ, ಅದಕ್ಕೆ ತಕ್ಕಂತೆ ಹೊಸ ಹೊಸ ವೈರಸ್‌ಗಳು ಉಗಮಗೊಳ್ಳುತ್ತವೆ ಮತ್ತು 1960ರಿಂದೀಚೆಗೆ ಅದು ಶೇ. 30ರಷ್ಟು ಏರಿಕೆ ಕಂಡಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಕೋವಿಡ್ 19ರ ವೈರಸ್‌ಗಳು ಪ್ರಾಣಿಗಳ ಜೀವಕೋಶದಲ್ಲಿದ್ದರೂ, ಆ ಸೋಂಕನ್ನು ಪ್ರಪಂಚದಾದ್ಯಂತ ಹಬ್ಬಿಸಿದ್ದು, ಮನುಷ್ಯನ ತಿನ್ನುಬಾಕ ಕೆಲಸ ಎಂಬುದರಲ್ಲಿ ಯಾವ ಅನುಮಾನವೂ ಉಳಿದಿಲ್ಲ. ಪ್ರಾಣಿ ಮತ್ತು ಹಕ್ಕಿಗಳಲ್ಲಿರುವ 17 ಲಕ್ಷ ವೈರಸ್‌ಗಳನ್ನು ಇನ್ನೂ ಪತ್ತೆ ಮಾಡಬೇಕಾಗಿದೆ. ಇವುಗಳಲ್ಲಿ ಅರ್ಧದಷ್ಟು

